**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ.ನ್ಯಾ ದಂ. ರವರ ನ್ಯಾಯಾಲಯ, ಚಾಮರಾಜನಗರ**

**ಸಿಸಿ ನಂ : 393/2026**

**ಫಿರ್ಯಾದಿ** : ಸರ್ಕಾರದ ಪರ ಪಟ್ಟಣ ಪೊಲೀಸ್ ಠಾಣೆ,
ಚಾಮರಾಜನಗರ.

**ವಿರುದ್ಧ**

**ಆರೋಪಿಗಳು** :

1. ಕೊಂಬನ್ ಕುಮಾರ್ @ ಕುಮಾರ್
   ಬಿನ್ ಮಾಡಸ್ವಾಮಿ,
   ವಯಸ್ಸುಃ 40 ವರ್ಷ,
   ವಾಸಃ ಸೌತ್ ಪಣವಡಲಿ, ಛತ್ತರಂ ಪೋಸ್ಟ್,
   ಶಂಕರನ್ ಕೊಯಿಲ್, ತೆಂಕಾಸಿ ಜಿಲ್ಲೆ,
   ತಮಿಳುನಾಡು.
2. ಪಾಂಡಿ ಬಿನ್ ಮಾರಿಮುತ್ತು,
   ವಯಸ್ಸುಃ 33 ವರ್ಷ,
   ವಾಸಃ ಗಣೇಶ ಪುರಂ, ಕೆ ವೇಲಗುಂಡಿ,
   ಕಾರೆಕುಟ್ಟಿ ತಾಲ್ಲೂಕು, ಶಿವಗಂಗೆ ಜಿಲ್ಲೆ,
   ತಮಿಳುನಾಡು.

## ದೋ ಷಾ ರೋ ಪ ಣೆ

**ಶ್ರೀ ಸುನಿಲ್ .ಆರ್, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,**

**ಮೊದಲನೇಯದಾಗಿ,** ದಿನಾಂಕ: 30.10.2025 ರಂದು ರಾತ್ರಿ 12.00 ಗಂಟೆ ಸಮಯದಲ್ಲಿ, ಚಾಮರಾಜನಗರ ಪಟ್ಟಣ ಪೊಲೀಸ್ ಠಾಣಾ ಸರಹದ್ದು, ಚಾಮರಾಜನಗರದ ಬುದ್ಧನಗರದ ಬಡಾವಣೆಯಲ್ಲಿರುವ ಚಾಸಾಃ 1 ರವರ ಮನೆಯ ಬಾಗಿಲ ಬೀಗವನ್ನು 1 ಮತ್ತು 2 ನೇ ಆರೋಪಿಗಳಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಕಬ್ಬಿಣದ ರಾಡ್‌ನಿಂದ ಮೀಟಿ ಮುರಿದಿದ್ದು, ಆ ಮೂಲಕ **ಭಾರತೀಯ ನ್ಯಾಯ ಸಂಹಿತಾ ಕಲಂ 331(4)** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

**ಎರಡನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಚಾಸಾಃ 1 ರವರ ಮನೆಯ ಬಾಗಿಲನ್ನು ಮುರಿದು ಮನೆಯ ಒಳಗೆ ಹೋಗಿ ಮನೆಯ ರೂಂನ ಮಂಚದ ಮೇಲಿದ್ದ ಒಂದು ಲ್ಯಾಪ್ ಟಾಪ್ ಅನ್ನು ಅದರ ಬ್ಯಾಗ್‌ನಲ್ಲಿದ್ದ ಲಾಕರ್ ಕೀ ಹಾಗೂ ದಾಖಲೆಪತ್ರಗಳನ್ನು, ದೇವರ ಮನೆಯಲ್ಲಿದ್ದ ಬೆಳ್ಳಿಯ 16 ಗ್ರಾಂ 290 ಮಿಲಿ, 21 ಗ್ರಾಂ 580 ಮಿಲಿಯ ಲಕ್ಷ್ಮೀ ದೇವರ 2 ಚಿಕ್ಕ ಮೂರ್ತಿಗಳು, 19 ಗ್ರಾಂ 890 ಮಿಲಿಯ ಬೆಳ್ಳಿಯ ಗಣಪತಿ ಮೂರ್ತಿಯನ್ನು ಸೇರಿ ಒಟ್ಟು 57ಗ್ರಾಂ 780 ಮಿಲಿ ಬೆಳ್ಳಿ ಹಾಗೂ ಮನೆಯಲ್ಲಿದ್ದ 120 ರೂಪಾಯಿ ಹಣವನ್ನು ಕಳ್ಳತನಮಾಡಿ ಆ ಮೂಲಕ, **ಭಾರತೀಯ ನ್ಯಾಯ ಸಂಹಿತಾ ಕಲಂ 305** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

**ಪ್ರಶ್ನೆ : 1** : ನಿಮಗೆ ಓದಿ ಹೇಳಿದುದ್ದು ಅರ್ಥವಾಯಿತೇ ?

**ಉತ್ತರ:**

**ಪ್ರಶ್ನೆ : 2** : ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

**ಉತ್ತರ:**

ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ವಿವರಿಸಲಾಗಿ, ಅವರು ಅರ್ಥಮಾಡಿಕೊಂಡು ನೀಡಲಾದ ಉತ್ತರಗಳನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢಿಕರಿಸಿರುತ್ತೇನೆ.

ದಿನಾಂಕ: 15.04.2026

**(ಶ್ರೀ. ಸುನಿಲ್ .ಆರ್ )**
**1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚಾಮರಾಜನಗರ.**

**ಆರೋಪಿತರ ಸಹಿ:**